ಪಿ.ಡಬ್ಲ್ಯೂ ಃ **1**

ಸಾಕ್ಷಿಗೆ ದಿನಾಂಕಃ **26.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು**: 2** ನೇ ಎದುರುದಾರರ ಪರ **:** ಶ್ರೀ**.** ವಕೀಲರಿಂದ**:**

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತದ ವಿಚಾರವನ್ನು ನನಗೆ ಪೊಲೀಸರು ತಿಳಿಸಿರುತ್ತಾರೆ. ನಾನು ಅಪಘಾತದ ಸ್ಥಳಕ್ಕೆ ಹೋಗಿದ್ದೆ. ನಾನು ನೋಡಿದಾಗ ನನ್ನ ಮಗನಿಗೆ ಪ್ರಜ್ಞೆ ಇರಲಿಲ್ಲ. ನನ್ನ ಮಗನನ್ನು ಮೊದಲು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಕನಕಪುರ ಆಸ್ಪತ್ರೆಯಲ್ಲಿ ನನ್ನ ಮಗನಿಗೆ ಪ್ರಜ್ಞೆ ಬಂದಿರಲಿಲ್ಲ. ನನ್ನ ಮಗನು ಅದೇ ದಿನ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಮಗನು ಚಾಲನೆ ಮಾಡುತ್ತಿದ್ದ ಬೈಕ್ ಅವರಿಗೆ ಸೇರಿತ್ತು. ನನ್ನ ಮಗನು ಊರಿಗೆ ಬಂದು ವಾಪಸ್ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನನ್ನ ಮಗನು ಅತೀವೇಗ ಮತ್ತು ಅಜಾಗರೂಕತೆಯಿಂದ ಬೈಕ್‌ನ್ನು ಚಾಲನೆ ಮಾಡಿ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಬೈಕ್ ಚಾಲನೆ ಮಾಡಲು ಗೊತ್ತಿರಲಿಲ್ಲ ಮತ್ತು ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. ನನ್ನಮಗನಿಗೆ ಡಿ.ಎಲ್. ಇಲ್ಲದ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಬಗ್ಗೆ ತಿಳಿದುಕೊಂಡಿರುತ್ತೇನೆ. ಎದುರುಬದುರು ವಾಹನಗಳು ಡಿಕ್ಕಿಯಾಗಿರುತ್ತವೆ ಎಂದರೆ ಹಿಂದುಗಡೆಯಿಂದ ಬಂದು ಟಿಪ್ಪರ್ ಲಾರಿ ಡಿಕ್ಕಿ ಪಡಿಸಿರುತ್ತದೆ.

2. ನಾನು ಈಗ ಕೂಲಿ ಕೆಲಸ ಮಾಡುತ್ತಿದ್ದೇನೆ. 2 ನೇ ಅರ್ಜಿದಾರರು ಮನೆಯಲ್ಲಿ ಇದ್ದು, ಯಾವುದೇ ವೃತ್ತಿಯನ್ನು ಮಾಡುವುದಿಲ್ಲ. 2 ನೇ ಅರ್ಜಿದಾರರು ನಮ್ಮ ಕುಟುಂಬದವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸೇರಿದಂತೆ 1 ಎಕರೆ ಜಮೀನು ಇರುತ್ತದೆ. ನನ್ನಮಗನು ಇದ್ದಾಗ ಸದರಿ ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದೆವು. ಸದರಿ ಜಮೀನಿನಲ್ಲಿ ಈಗಲೂ ಆದಾಯ ಬರುತ್ತಿದೆ ಎಂದರೆ ಸರಿಯಲ್ಲ. ನನ್ನಮಗನು ಮೃತರಾದ 5 ದಿನದ ನಂತರ ನಿಪಿ 11 ನ್ನು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 11 ನ್ನು ನೀಡಿದವರನ್ನು ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ. ನನ್ನ ಮಗನಿಗೆ ವೇತನವನ್ನು ನನ್ನ ಮಗನ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮಗನ ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಮಗನು ಮೃತರಾಗುವ ಪೂರ್ವದ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮಗನು ನಾನು ಹೇಳುವ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನು ಮೃತರಾದ ನಂತರ ಕಾರ್ಯಕ್ಕೆ ಖರ್ಚಾಗಿರುತ್ತದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸಂಬಂಧವಾಗಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನಾನು ದೂರು ನೀಡಿರುತ್ತೇನೆ. ನನ್ನ ಮಗನ ತಪ್ಪಿನಿಂದ ಅಪಘಾತವಾಗಿದ್ದು, ಟಿಪ್ಪರ್ ಲಾರಿಯ ಚಾಲಕನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿರುವುದರಿಂದ 2 ನೇ ಎದುರುದಾರರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**1** ನೇ ಎದುರುದಾರರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.